## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2017-18ನೇ ಸಾಲಿನ ಪ್ರಗತಿಯನ್ನು ಆಧರಿಸಿ 2019ನೇ ಸಾಲಿನಲ್ಲಿ "ದೀನ್ ದಯಾಳ್ ಉಪಾಧ್ಯಾಯ್ ಪಂಚಾಯತಿ ಸಶಕ್ತೀಕರಣ ಪುರಸ್ಕಾರ"ದಡಿ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಘೋಷಣೆಯಾಗಿರುವ ಪ್ರೋತ್ಸಾಹಕ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:

ಸರ್ಕಾರದ ಅಧೀನ ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ(ಆಡಳಿತ ವಿಭಾಗ), ಭಾರತ ಸರ್ಕಾರದ ಆದೇಶ ಪತ್ರ ಸಂಖ್ಯೆ: N-11019/13/2018-Governance, ದಿನಾಂಕ:25-11-2019.

ಪ್ರಸ್ತಾವನೆ:

ಮೇಲೆ ಓದಲಾದ ಭಾರತ ಸರ್ಕಾರದ ಬಿಡುಗಡೆ ಆದೇಶ ಪತ್ರದ ಮೂಲಕ ದೀನ್ ದಯಾಳ್ ಉಪಾಧ್ಯಾಯ್ ಪಂಚಾಯತಿ ಸಶಕ್ತೀಕರಣ ಪುರಸ್ಕಾರ ಪ್ರಶಸ್ತಿಗಳನ್ನು ಘೋಷಣೆ ಮಾಡಲಾಗಿದೆ. ದಾವಣಗೆರೆ ಜಿಲ್ಲಾ ಪಂಚಾಯತಿ, ಮೂಡಿಗೆರೆ ತಾಲ್ಲೂಕು ಪಂಚಾಯತಿ (ಚಿಕ್ಕಮಗಳೂರು ಜಿಲ್ಲೆ) ಮತ್ತು ಶ್ರೀರಂಗಪಟ್ಟಣ ತಾಲ್ಲೂಕು ಪಂಚಾಯತಿ(ಮಂಡ್ಯ ಜಿಲ್ಲೆ) ಮತ್ತು ಬಾಶೆಟ್ಟಿಹಳ್ಳಿ (ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ), ರಾಜಾನುಕುಂಟೆ (ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ) ಹಾಗೂ ಮೆನ್ನಬೆಟ್ಟು (ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ) ಗ್ರಾಮ ಪಂಚಾಯತಿಗಳು ಭಾರತ ಸರ್ಕಾರದ "ದೀನ್ ದಯಾಳ್ ಉಪಾಧ್ಯಾಯ್ ಪಂಚಾಯತಿ ಸಶಕ್ತೀಕರಣ" ಪ್ರಶಸ್ತಿಗಳಿಗೆ ಭಾಜನವಾಗಿವೆ. ಈ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಒಟ್ಟು ರೂ.138.00 ಲಕ್ಷಗಳು (ಒಂದು ನೂರ ಮೂವತ್ತೆಂಟು ಲಕ್ಷ ರೂಪಾಯಿಗಳು ಮಾತ್ರ) ನಗದು ಬಹುಮಾನವನ್ನು ಘೋಷಿಸಲಾಗಿದೆ. ಘೋಷಿಸಲಾದ ನಗದು ಬಹುಮಾನವನ್ನು ಆಯಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸುವ ಕುರಿತು ಸರ್ಕಾರದ ಆದೇಶವನ್ನು ಹೊರಡಿಸಬೇಕಾಗಿರುತ್ತದೆ. ಅದರಂತೆ, ಈ ಕೆಳಕಂಡ ಆದೇಶ.

### ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 07 ಜಿಪಸ 2020, ದಿನಾಂಕ:16-01-2020

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿದ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅವುಗಳ ಮುಂದೆ ಕಾಣಿಸಿರುವ ಮೊತ್ತವನ್ನು ಅಂದರೆ, ಒಟ್ಟು ರೂ.138.00(ಒಂದು ನೂರ ಮೂವತ್ತೆಂಟು ಲಕ್ಷ ರೂಪಾಯಿಗಳು ಮಾತ್ರ)ಲಕ್ಷಗಳನ್ನು 2017-18ನೇ ಸಾಲಿನ ಪ್ರಗತಿಯನ್ನು ಆಧರಿಸಿ 2019ನೇ ಸಾಲಿನಲ್ಲಿ "ದೀನ್ ದಯಾಳ್ ಉಪಾಧ್ಯಾಯ್ ಪಂಚಾಯತಿ ಸಶಕ್ತೀಕರಣ ಪುರಸ್ಕಾರ"ದಡಿ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಘೋಷಣೆಯಾಗಿರುವ ಪ್ರೋತ್ಸಾಹಕ ಅನುದಾನವನ್ನು ವಿತರಿಸಲು ಆದೇಶಿಸಿದೆ.

ರಾಜೀವ್ ಗಾಂಧಿ ಪಂಚಾಯತಿ ಸಶಕ್ತಿಕರಣ ಅಭಿಯಾನ (ಆರ್.ಜಿ.ಪಿ.ಎಸ್.ಎ) ಯೋಜನೆಯಡಿ ರಾಜ್ಯ ಸರ್ಕಾರದ ವತಿಯಿಂದ ಬ್ಯಾಂಕ್ ಆಫ್ ಬರೋಡಾ, ಇಂದಿರಾನಗರ ಶಾಖೆಯಲ್ಲಿ ತೆರೆಯಲಾಗಿರುವ ಉಳಿತಾಯ ಖಾತೆ ಸಂಖ್ಯೆ 05211002648ಯಿಂದ ಪ್ರಶಸ್ತಿಗಳನ್ನು ಪಡೆದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಗ್ರಾಮ ಪಂಚಾಯತಿಗಳಿಗೆ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ & ಜಿಲ್ಲಾ ಪಂಚಾಯತಿಗೆ ನಗದು ಬಹುಮಾನವನ್ನು ಸಂಬಂಧಪಟ್ಟ ಪಂಚಾಯತ್ ರಾಜ್ ಸಂಸ್ಥೆಗಳ ಉಳಿತಾಯ ಖಾತೆಗಳಿಗೆ ವರ್ಗಾಯಿಸಲು ಆದೇಶಿಸಿದೆ. ಈ ಅನುದಾನವನ್ನು, ಪಂಚಾಯತ್ ರಾಜ್ ಸಂಸ್ಥೆಗಳು ದೀನ್

ದಯಾಳ್ ಉಪಾಧ್ಯಾಯ್ ಪಂಚಾಯತಿ ಸಶಕ್ತೀಕರಣ ಪುರಸ್ಕಾರದಡಿ ಪ್ರತ್ಯೇಕವಾಗಿ ಖಾತೆಯನ್ನು ತೆರೆದು ಆ ಖಾತೆಯ ಮುಖಾಂತರ ಈ ಯೋಜನೆಯ ಅನುದಾನದ ವ್ಯವಹಾರವನ್ನು ನಡೆಸತಕ್ಕದ್ದು.

| ಕ್ರ. ಸಂ | ಪ್ರಶಸ್ತಿಗಳನ್ನು ಗಳಿಸಿರುವ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳು | ಘೋಷಣೆ ಮಾಡಲಾದಂತೆ ವಿತರಿಸಲಾಗುತ್ತಿರುವ ನಗದು ಬಹುಮಾನ (ರೂ. ಲಕ್ಷಗಳಲ್ಲಿ) | ಉಳಿತಾಯ ಖಾತೆ ಸಂಖ್ಯೆ | ಬ್ಯಾಂಕ್‌ನ ಹೆಸರು ಮತ್ತು ಶಾಖೆ | ಐ.ಎಫ್.ಎಸ್.ಸಿ. ಕೋಡ್ |
|---|---|---|---|---|---|
| | ಜಿಲ್ಲಾ ಪಂಚಾಯತಿ | | | | |
| 1 | ದಾವಣಗೆರೆ ಜಿಲ್ಲಾ ಪಂಚಾಯತಿ | 50.00 | 54042043217 | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಂಡಿಪೇಟೆ ದಾವಣಗೆರೆ. | SBIN0040108 |
| | ತಾಲ್ಲೂಕು ಪಂಚಾಯತಿಗಳು | | | | |
| 1 | ಮೂಡಿಗೆರೆ ತಾಲ್ಲೂಕು ಪಂಚಾಯತಿ (ಚಿಕ್ಕಮಗಳೂರು ಜಿಲ್ಲೆ) | 25.00 | 115101292000001 | ಬ್ಯಾಂಕ್ ಆಫ್ ಬರೋಡಾ, ಕೆ.ಎಂ.ರೋಡ್ ಮೂಡಿಗೆರೆ ಶಾಖೆ. | VIJB0001151 |
| 2 | ಶ್ರೀರಂಗಪಟ್ಟಣ ತಾಲ್ಲೂಕು ಪಂಚಾಯತಿ (ಮಂಡ್ಯ ಜಿಲ್ಲೆ) | 25.00 | 520101032809774 | ಕಾರ್ಪೋರೇಶನ್ ಬ್ಯಾಂಕ್, ಶ್ರೀರಂಗಪಟ್ಟಣ ಶಾಖೆ | CORP0003053 |
| | ಗ್ರಾಮ ಪಂಚಾಯತಿಗಳು | | | | |
| 1 | ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ (ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ) | 15.00 | 10532695594 | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಾಶೆಟ್ಟಿಹಳ್ಳಿಶಾಖೆ. | SBIN0008088 |
| 2 | ರಾಜಾನುಕುಂಟೆ ಗ್ರಾಮ ಪಂಚಾಯತಿ (ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ) | 15.00 | 520101029322401 | ಕಾರ್ಪೋರೇಶನ್ ಬ್ಯಾಂಕ್, ರಾಜಾನುಕುಂಟೆ ಶಾಖೆ. | CORP0001181 |
| 3 | ಮೆನ್ನಬೆಟ್ಟು ಗ್ರಾಮ ಪಂಚಾಯತಿ (ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ) | 8.00 | 112001011001313 | ಬ್ಯಾಂಕ್ ಆಫ್ ಬರೋಡಾ, | VIJB0001120 |

ಈ ಆದೇಶದ ಮೂಲಕ ಬಿಡುಗಡೆಗೊಳಿಸಲಾದ ಬಹುಮಾನದ ಮೊತ್ತವನ್ನು ಬಳಸಲು ಈ ಕೆಳಕಂಡ ಮಾರ್ಗಸೂಚಿಗಳ ಅನುಸಾರ ಮಾತ್ರವೇ ಕ್ರಮವಹಿಸತಕ್ಕದ್ದು.

1. ಕಾಮಗಾರಿಗಳ ಅನುಷ್ಠಾನವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999/2000 ಹಾಗೂ ಸದರಿ ಅಧಿನಿಯಮಕ್ಕೆ ಕಾಲಕಾಲಕ್ಕೆ ಮಾಡಲಾದ ಎಲ್ಲಾ ತಿದ್ದುಪಡಿಗಳ ಅನುಸಾರ ನೆರವೇರಿಸತಕ್ಕದ್ದು.
2. ಕ್ರಿಯಾಯೋಜನೆಯನ್ನು ತಯಾರಿಸುವಾಗ ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಹಾಗೂ ನಾಗರೀಕ ಸೌಲಭ್ಯಗಳನ್ನು ವೃದ್ಧಿಸುವಂತಹ ಜೀವನೋಪಾಯದ ಬೆಂಬಲ, ಆಸ್ತಿ ಸೃಜನೆ, ನಾಗರೀಕ ಮೂಲಭೂತ ಸೌಲಭ್ಯಗಳ ಸೃಷ್ಠಿ ಹಾಗೂ ನಿರ್ವಹಣೆಗಾಗಿ ಅನುದಾನವನ್ನು ಬಳಸಲು ಸಂಬಂಧಿಸಿದ ಚಟುವಟಿಕೆಗಳನ್ನು ಸೇರ್ಪಡೆಗೊಳಿಸಿಕೊಳ್ಳಬಹುದು.
3. ಗ್ರಾಮ ಪಂಚಾಯತಿಗೆ ಬಿಡುಗಡೆಗೊಳಿಸಿರುವ ಮೊತ್ತದಲ್ಲಿ ಶಾಶ್ವತ ಆಸ್ತಿ ಸೃಜನೆಯಾಗುವಂತಹ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಬಹುದು. ಈ ಆಸ್ತಿಗಳ ಸೃಜನೆಯಿಂದಾಗಿ ಗ್ರಾಮ ಪಂಚಾಯತಿಗೆ ನಿಗಧಿತ ಆದಾಯ ಬರುವಂತಹ ಕಾಮಗಾರಿಗಳಿಗೆ ಹೆಚ್ಚು ಆದ್ಯತೆ ನೀಡಬಹುದು.
4. ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸಿದ ಅನುದಾನವು "ದೀನ್ ದಯಾಳ್ ಉಪಾಧ್ಯಾಯ್ ಪಂಚಾಯತಿ ಸಶಕ್ತೀಕರಣ" ರಾಷ್ಟ್ರೀಯ ಪುರಸ್ಕಾರದ ವಿಶೇಷ ಉದ್ದೇಶಗಳನ್ನು ಈಡೇರಿಸಲು ಬಳಸಿಕೊಳ್ಳುವುದು. ನಾಗರೀಕರಿಗೆ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಗ್ರಾಮ ಸಭೆ/ವಾರ್ಡ್ ಸಭೆ/ಮಹಿಳಾ ಸಭೆಗಳನ್ನು ಆಯೋಜಿಸುವುದು.
5. ಕಾಮಗಾರಿಗಳ ಅನುಷ್ಠಾನದಲ್ಲಿ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳುವುದು.
6. ನಗದು ಬಹುಮಾನವನ್ನು ಬಾಕಿ ಉಳಿಸದೇ ಬಿಡುಗಡೆಗೊಳಿಸಿದ ಪೂರ್ಣ ಮೊತ್ತಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಿಸತಕ್ಕದ್ದು. ಈ ಕ್ರಿಯಾಯೋಜನೆಯು ಆಯಾ ಪಂಚಾಯತಿ ಸಂಸ್ಥೆಯ ಆಯವ್ಯಯ ಮತ್ತು ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು.
7. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳನ್ನು ರೂಪಿಸಿದ ನಂತರ ಯೋಜನೆಗಳಲ್ಲಿ ಕಂಡುಬರುವ ಅಂತರಗಳನ್ನು ಕಡಿಮೆ ಮಾಡಲು ಬಳಸುವುದು.
8. ನಗದು ಬಹುಮಾನದ ಶೇಖಡ 25ರಷ್ಟನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವರ್ಗಗಳ ಕಲ್ಯಾಣಕ್ಕೆ ವಿನಿಯೋಗಿಸತಕ್ಕದ್ದು ಹಾಗೆಯೇ ಶೇಕಡ 5ರಷ್ಟನ್ನು ವಿಕಲಚೇತನರಿಗೆ ವಿನಿಯೋಗಿಸುವುದು.
9. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ (3) ಹಾಗೂ 3(ಎ) ಪ್ರಕಾರ ವಾರ್ಡ್ ಸಭೆ ಹಾಗೂ ಗ್ರಾಮ ಸಭೆ ಶಿಫಾರಸ್ಸುಗಳನ್ನು ಆದ್ಯತೆಗನುಸಾರ ಗ್ರಾಮ ಪಂಚಾಯತಿ ಸಭೆಯಲ್ಲಿ ಅಭಿವೃದ್ಧಿ ಯೋಜನೆಯ ಅನುಮೋದನೆ ಪಡೆಯುವುದನ್ನು ಕಡ್ಡಾಯಗೊಳಿಸಿದೆ.
10. ಪ್ರಗತಿ ವರದಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದು ಹಾಗೂ ಹಣ ಬಳಕೆ ನಮೂನೆ ಪತ್ರ (GFR 12–C [(See Rule 239)])ವನ್ನು ಸರ್ಕಾರಕ್ಕೆ ಸಲ್ಲಿಸುವುದು (ಪ್ರತಿಯನ್ನು ಲಗತ್ತಿಸಿದೆ).

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

16.01.2020
(ಸಿ.ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

16.01.2020

ಗೆ:

1. ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಜಿ&ಎಸ್.ಎಸ್.ಎ), ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಇ&ಆರ್‌ಎಸ್‌ಎ), ಕರ್ನಾಟಕ, ಬೆಂಗಳೂರು.

4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿಗಳು, ದಾವಣಗೆರೆ, ಚಿಕ್ಕಮಗಳೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಮತ್ತು ದಕ್ಷಿನ ಕನ್ನಡ.
5. ವಿಶೇಷಾಧಿಕಾರಿ, ಜಿಲ್ಲಾ ಪಂಚಾಯತಿ, ಆರ್ಥಿಕ ಇಲಾಖೆ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
7. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು, ಮೂಡಿಗೆರೆ, ಶ್ರೀರಂಗಪಟ್ಟಣ, ದೊಡ್ಡಬಳ್ಳಾಪುರ, ಬೆಂಗಳೂರು ಉತ್ತರ ಮತ್ತು ಮಂಗಳೂರು.
8. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ (ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ), ರಾಜಾನುಕುಂಟೆ ಗ್ರಾಮ ಪಂಚಾಯತಿ (ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ), ಮೆನ್ನಬೆಟ್ಟು ಗ್ರಾಮ ಪಂಚಾಯತಿ (ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ).
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
4. ನಿರ್ದೇಶಕರು(ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.